## ಮದುವೆ ಬಜೆಟ್



ಫೆ. 13ರ ಸಂಚಿಕೆಯಲ್ಲಿ ಸುರೇಖಾ ಹೆಗಡೆ ಬರೆದಿರುವ 'ಮದುವೆ ಬಜೆಟ್' ಲೇಖನ ಚೆನ್ನಾಗಿದೆ. ನಾವು ಮದುವೆ ಮತ್ತು ಇತರೆ ಸಂದರ್ಭದಲ್ಲಿ ಗಮನಿಸದ ವಿಷಯ ಇಂತಿವೆ;

1. ಸಿಹಿತಿಂಡಿ ಕೆಲವು ಕಡೆ ಮೂರು ನಾಲ್ಕು ಇರುತ್ತೆ. ಇತ್ತೀಚಿನ ಸಮೀಕ್ಷೆಯ ಪ್ರಕಾರ 45 ವರ್ಷ ದಾಟಿದ ಜನರಲ್ಲಿ ಶೇಕಡ 85 ರಷ್ಟು ಜನರಿಗೆ ಬಿಪಿ, ಶುಗರ್, ಥೈರಾಯ್ಡ್ ಸಮಸ್ಯೆ ಇದೆ, ಅಷ್ಟೊಂದು ಸಿಹಿತಿಂಡಿ ಯಾರು ತಿಂತಾರೆ?
2. ನೀರಿನ ಬಾಟ್ಲಿ 500 ಎಂ.ಎಲ್. ಕೊಡ್ತಾರೆ. ಸುಮಾರು ಜನ 200 ಎಂ.ಎಲ್. ಕೂಡ ಕುಡಿಯಲ್ಲ.
3. ಊಟದ ಸಮಯದಲ್ಲಿ ಜನ ಎಲೆ ಮುಂದೆ ಕೂತು ಮೊಬೈಲು ನೋಡ್ತಾ ಇರ್ತಾರೆ. ಬಡಿಸುವವರು ಅವರಿಗೆ ಏನು ಬೇಕು ಏನು ಬೇಡ ಎಂದು ವಿಚಾರಿಸದೆ ಬಡಿಸಿ ಹೋಗುತ್ತಾರೆ.
4. 800 ಜನ ಬರ್ತಾರೆ ಅಂತ ಗೊತ್ತಿದ್ದೂ 1000 ಜನಕ್ಕೆ ಅಡುಗೆ ಮಾಡಿಸ್ತಾರೆ. ಹೀಗಾದರೆ ಆಹಾರ ವೇಸ್ಟ್ ಆಗದೆ ಇನ್ನೇನು ಆಗುತ್ತೆ?

—ಆರ್.ಆರ್. ಶೆಟ್ಟಿ

ಮುಖಪುಟದ ಲೇಖನ ಮದುವೆಗಿಂತಲೂ ಅದ್ದೂರಿಯಾಗಿ ಮಾಡಿಬಂದಿದೆ. ಇದೇ ರೀತಿ ಅನೇಕ ಸರಳ ಮತ್ತು ಸಾಮೂಹಿಕ ಮದುವೆಗಳು ನಡೆಯುತ್ತಿರುವುದು ತಿಳಿದ ವಿಚಾರ. ಇವುಗಳನ್ನು ಮಾಧ್ಯಮದವರು ಸಹ ಅಷ್ಟಾಗಿ ಗಮನಿಸುವುದಿಲ್ಲ. ಮಂತ್ರ ಮಾಂಗಲ್ಯ ಮದುವೆ ಮತ್ತು ಹಳ್ಳಿಗಳಲ್ಲಿ, ದೇವಸ್ಥಾನ, ಮಠಗಳಲ್ಲಿ ನಡೆಯುವ ಸರಳ ಮದುವೆಗಳ ಬಗ್ಗೆಯೂ ಚಿಂತನೆ ಮಾಡಬೇಕು. ಅವುಗಳಿಗೂ ಪ್ರಚಾರ ಸಿಗಬೇಕು.

—ಜಿ.ಎಸ್. ಕುಮಾರಸ್ವಾಮಿ

'ಮದುವೆ ಬಜೆಟ್' ಲೇಖನ ಸಂದರ್ಭೋಚಿತವಾಗಿದೆ. ಆದರೆ ಸರಳ ಮದುವೆ ಬಗ್ಗೆ ವಿವರವಾಗಿ ತಿಳಿಸಬೇಕಾಗಿತ್ತು.

—ತಿಮ್ಮರಾಜು ಎಸ್.ಆರ್.

'ಮದುವೆ ಬಜೆಟ್' ಲೇಖನಕ್ಕೆ 'ಶಹಭಾಶ್' ಹೇಳುತ್ತೇನೆ. ಹಾಗೆಯೇ ಈ ಲೇಖನವನ್ನು ನಾವುಗಳೇ ಆಯ್ಕೆ ಮಾಡಿ ವಿಧಾನ ಸಭೆಗೆ, ಸಂಸತ್ತಿಗೆ ಕಳುಹಿಸಿರುವ ಶಾಸಕರಿಗೆ, ಸಂಸತ್ ಸದಸ್ಯರಿಗೆ ವಿನಮ್ರತೆಯಿಂದ ಕಳುಹಿಸಿದರೆ ಒಳಿತೇನೋ ಅನಿಸುತ್ತೆ.

ರಾಜ್ಯದ ಮಾಜಿ ಮುಖ್ಯಮಂತ್ರಿಗಳು ತಮ್ಮ ಏಕೈಕ ಪುತ್ರನ ನಿಶ್ಚಿತಾರ್ಥವನ್ನು ಪಂಚತಾರಾ ಹೋಟೆಲ್‌ನಲ್ಲಿ ನೆರವೇರಿಸಿರುವುದನ್ನು ಹೇಗೆ ಅರ್ಥೈಸಿಕೊಳ್ಳುವುದು?

ಮುಖಂಡರುಗಳು ಸಾರ್ವಜನಿಕರಿಗೆ ಸರಳ ಜೀವನದ ವಿಚಾರದಲ್ಲಿ ಮಾರ್ಗದರ್ಶಕರಾದರೆ ಸೂಕ್ತವಲ್ಲವೇ?

—ರಾಜೀವ್ ಎನ್. ಮಾಗಲ್, ಹಾಸನ

ಮದುವೆ ಎನ್ನುವುದು ಎರಡು ಮನಸ್ಸುಗಳ, ಎರಡು ಬದುಕುಗಳ ಬೆಸುಗೆ. ಅದು ಎರಡು ಕುಟುಂಬಗಳ ಅನುಬಂಧವೂ ಹೌದು. ಅದನ್ನು ಅದ್ದೂರಿಯಲ್ಲಿ ಅಳೆಯುವ, ಪ್ರತಿಷ್ಠೆಯ ವಿಷಯವಾಗಿ ತೆಗೆದುಕೊಳ್ಳುವುದೇ ತಪ್ಪು. ಹಾಗಾಗಿ ವಿವಾಹದ ನೆಪದಲ್ಲಿ ದುಂದುವೆಚ್ಚ ಮಾಡುವುದರಲ್ಲಿ ಯಾವುದೇ ಅರ್ಥವೂ ಇಲ್ಲ.

—ರಂಗಸ್ವಾಮಿ ಕೆ.ಬಿ. ಹುಬ್ಬಳ್ಳಿ

### ಗೊಂಬೆಗಳ ಕಥೆ

ಫೆ. 13ರ ಸಂಚಿಕೆಯಲ್ಲಿ ಪ್ರಕಟಗೊಂಡ ಡಿ.ಎಂ ಘನಶ್ಯಾಮ ಅವರ 'ಜಪಾನಿನ ಗೊಂಬೆಗಳು ಹೇಳಿದ ಕಥೆ' ಮನ ಮಿಡಿಯುವಂತಿತ್ತು. ಜಪಾನ್ ದೇಶದ ಗ್ರಾಮೀಣ ಪ್ರದೇಶದ ವಿದ್ಯಮಾನದ ವಾಸ್ತವಿಕ ಚಿತ್ರಣ ಲೇಖನದಲ್ಲಿದೆ. ಇಲ್ಲಿ ಜನಿಸುವ ಮಕ್ಕಳಿಗಿಂತ ಸಾಯುವವರ ಸಂಖ್ಯೆ ಹೆಚ್ಚು. ಇತರ ದೇಶದ ಸಮಸ್ಯೆಗಿಂತ ವಿಭಿನ್ನ ಸಮಸ್ಯೆ. ಊರೆಲ್ಲಾ ಜನರಿಲ್ಲದೇ ಸ್ಮಶಾನ ಮೌನವಾದ ಸ್ಥಿತಿ ಮನ ಕಲುಕಿತು. ಈ ಸಂಚಿಕೆಯ ಮಕ್ಕಳ ಕಥೆಗಳು ಬಲು ಸೊಗಸಾಗಿ ಮೂಡಿಬಂದಿವೆ.

—ಕೆ.ಪಿ.ರಾಮಗುಂಡಿ, ಬೈಲಹೊಂಗಲ


### ನಗೆಹೂವು ಬಾಡದಿರಲಿ

ಫೆ. 6ರ ಸಂಚಿಕೆಯ ಮುಖಪುಟದಲ್ಲಿ ಅಂದದ, ಚಂದದ ನಗೆಹೂವು ಮುದನೀಡಿತ್ತು. ಆದರೆ ಅದೇ ಲೇಖನವನ್ನು ('ನಗೆ ಹೂವು ಬಾಡದಿರಲಿ' ಲೇ: ಮಹತಿ) ಓದಿದ ಮೇಲೆ ಅರಿವಿಲ್ಲದೆಯೇ ಕಣ್ಣುಗಳಲ್ಲಿ ನೀರು ತುಂಬಿತ್ತು. ನಂತರದಲ್ಲಿ ಅದು ಕ್ರೋಧಾಗ್ನಿಯಾಗಿ ಮೈ ಕಂಪಿಸಿತು. ಆ್ಯಸಿಡ್ ದಾಳಿಗೆ ಬಲಿಯಾಗುವುದು ಅಮಾಯಕ, ಅಸಹಾಯಕ ಹೆಣ್ಣುಮಕ್ಕಳೇ. ತಮ್ಮ ಸ್ವಾರ್ಥ ಸಾಧನೆಗಾಗಿ, ವಿಕೃತ ಸಂತಸಕ್ಕಾಗಿ ಅವರನ್ನು ಹಿಂಸಿಸುವವರು ಮನುಷ್ಯರೇ ಅಲ್ಲ. ಇನ್ನೊಬ್ಬರ ಬದುಕನ್ನು ಬಲಿತೆಗೆದುಕೊಳ್ಳಲು ಅವರಿಗೆ ಏನು ಹಕ್ಕಿದೆ? ಹೀಗೆ ಆ್ಯಸಿಡ್ ದಾಳಿಗೆ ಬಲಿಯಾದವರಲ್ಲಿ ಅನೇಕರು ತಮ್ಮ ದುಃಸ್ಥಿತಿಗೆ ಕೊರಗುತ್ತಾ ಕೂಡದೆ, ಧೈರ್ಯದಿಂದ ಹೊಸ ಬಾಳು ಕಂಡುಕೊಂಡಿದ್ದಾರಷ್ಟೇ ಅಲ್ಲ, ಅಂಥ ದಾರುಣ ಸ್ಥಿತಿಯಲ್ಲಿ ಇರುವ ಇತರರಿಗೂ ದಾರಿದೀಪವಾಗಿದ್ದಾರೆ. ಇದೇ ಸಂತಸದ ಬೆಳ್ಳಿರೇಖೆ.

— ಶ್ರೀನಾಥ್ ಕೊನೇಟಿ, ಬೆಂಗಳೂರು

### ಮನೋವಿಲಾಸ

ಫೆ. 6ರ ಸಂಚಿಕೆಯಲ್ಲಿ ಕಂನಾಡಿಗಾ ನಾರಾಯಣ ಅವರು ಬರೆದಿರುವ 'ಮನೋವಿಲಾಸ' ಕಥೆ ವಿಶಿಷ್ಟವಾಗಿ ಮೂಡಿಬಂದಿದೆ. ಮನುಷ್ಯ ಸಂಪತ್ತು, ಜ್ಞಾನ, ಅಂತಸ್ತು ಅಂತ ಎಷ್ಟೇ ಸಾಧನೆ ಮಾಡಿದರೂ ಭಾವನೆಗಳ ಮೇರು ಶಿಖರವಾದ ತಾಯ್ತನದ ಅನುಭವ ಪಡೆದಾಗಲೇ ಜೀವನ ಸಾರ್ಥಕ. ಅದರಲ್ಲಿ ಎಷ್ಟೇ ಕಷ್ಟವಿರಲಿ,



ಹೋರಾಟವಿರಲಿ ತಾಯ್ತನದ ಅನುಭವ ಅಪೂರ್ವ ಎನ್ನುವುದು ಇದರಲ್ಲಿ ಸಾಬೀತಾಗಿದೆ. ಆದರೆ ಒಂದು ಮಾತು, ಡಾ. ಚಿರಂಜೀವಿ ಗರ್ಭ ಧರಿಸಿದ ಪ್ರಸಂಗ ತುಚ್ಛವಾಗಿದೆ. ಅದನ್ನು ಇನ್ನಷ್ಟು ಗಂಭೀರವೆನಿಸುವಂತೆ ಚಿತ್ರಿಸಬಹುದಿತ್ತು.

—ವಿನುತಾ ಹಂಚಿನಮನಿ, ಧಾರವಾಡ

### ಉಧೋ ಉಧೋ

ಫೆ. 6ರ ಸಂಚಿಕೆಯಲ್ಲಿ ಪ್ರಕಟವಾದ ಎಂ. ಮಹೇಶ ಅವರ 'ಉಧೋ ಉಧೋ' ಲೇಖನ ಓದಿದೆ. ಉತ್ತರ ಕರ್ನಾಟಕದ ಪ್ರಖ್ಯಾತ ಶಕ್ತಿಪೀಠವೆನಿಸಿರುವ ಸವದತ್ತಿ ಯಲ್ಲಮ್ಮ ದೇವಸ್ಥಾನ ಅಪಾರ ಭಕ್ತಗಣವನ್ನು ಹೊಂದಿದೆ. ಬಾಲ್ಯದಲ್ಲಿ ನಾನೂ ಕೂಡ ಚಕ್ಕಡಿಯಲ್ಲಿ ಆ ಜಾತ್ರೆಗೆ ಹೋಗಿದ್ದೆ. ಆ ಅನುಭವವೇ ವಿಭಿನ್ನ. ಇಲ್ಲಿ ನೀರಿಗಾಗಿ ಜಾತ್ರಾಸಮಯದಲ್ಲಿ ತೊಂದರೆ ಅನುಭವಿಸುತ್ತಾರೆ. ಸ್ವಚ್ಛತೆಯ ಕೊರತೆಯೂ ಇತ್ತು. ಈಗ ಸ್ವಲ್ಪ ಪರವಾಗಿಲ್ಲ. ಅಲ್ಲಲ್ಲಿ 'ದೇವದಾಸಿ ಪದ್ಧತಿಯಿಂದ ಬಿಡುಗಡೆ ಹೊಂದಿರಿ' ಎಂಬ ಜಾಗೃತಿ ಫಲಕಗಳನ್ನು ಹಾಕಿದ್ದಾರೆ. ಚಿತ್ರ ಮತ್ತು ಲೇಖನ ಎರಡೂ ಖುಷಿಕೊಟ್ಟಿತು.

—ಅಮೃತೇಶ್ ತಂಡರ, ಅಣ್ಣಿಗೇರಿ
ನಾ.ಕು. ಗಣೇಶ್, ಬೆಂಗಳೂರು
ಎಚ್. ಆನಂದ್ ಕುಮಾರ್, ಚಿತ್ರದುರ್ಗ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in